FRIDAY
March 21, 2025
BENGALURU
KARNATAKA EDITION
18 Pages ₹ 8.00

THE HINDU
www.thehindu.com
INDIA'S NATIONAL NEWSPAPER SINCE 1878

https://newsth.live/fb
https://newsth.live/x
https://newsth.live/g

RNI No. KARENG/1970/49845
Vol. 66 - No. 68

P-5

National conference on AI tools supporting Indian languages begins at CIIL

The Hindu Bureau
MYSURU



N. Deiva Sundaram, a retired professor in Tamil language at the University of Madras, Chennai, releasing the new language sets developed by LDC-IL during the two-day national conference at the Central Institute of Indian Languages in Mysuru on Thursday.
M.A. SRIRAM

The two-day national conference on the "Evaluation and benchmarking of publicly available artificial intelligence (AI) applications that support Indian languages" began at the Central Institute of Indian Languages (CIIL) in Mysuru on Thursday.

The event was organised by the Linguistic Data Consortium for Indian Languages (LDC-IL), a scheme of the Ministry of Education which is being implemented at the CIIL.

As artificial intelligence is currently the most happening in the technology sector, the conference was organised to explore its benefits on the Indian languages, and how the AI applications can be integrated into supporting the languages with the country being a home for so many languages.

After a formal inaugural session, a series of plenary sessions and paper presentations were held where experts shared their thoughts on the topics related to the evaluation and efficacy of AI applications for Indian languages. The issues and challenges were also discussed. The sessions will also be held on Friday.

Inaugurating the conference, N. Deiva Sundaram, a retired professor in Tamil language at the University of Madras, Chennai, spoke about how AI tools can be leveraged in the context of Indian languages and how benchmarking can be done. He elaborated on the linguistic data sets and the AI ecosystem that can be incorporated into language development, assessing the capacity of AI tools for benchmarking. Discussions are necessary on whether the available tools were sufficient for the regional languages and what more can be explored in this area, he said.

Speaking on the theme, CIIL Deputy Director Umarani Pappuswamy said the conference is a crucial collaborative platform for discussing benchmarking related to the Indian linguistic landscape. India required a benchmarking framework and AI tools for low-resource languages that play a key role, she said. On the occasion, 15 new language data sets developed at LDC-IL were released.

Also, the CIIL launched some multilingual AI and non-AI language tools that would be publicly available. The web-based tools, include *Anuvadika*, a translation engine focused on Indian languages equipped with ASR and TTS modules; *Anuvachika*, a Text-to-Speech engine that can be used to readily download speech for any given text in supported Indian languages; *Anulekhika*, an ASR tool where one speaks and writes or gets a transcription of the uploaded audio files; and *Lipyantara*, a transliteration engine that supports on-the-fly transliteration of text from one Indian script to another Indian script.

The details of the national conference can be accessed on the following website: www.ldcil.org/benchmarking.

ಶುಕ್ರವಾರ, ಮಾರ್ಚ್ 21, 2025 | ಮೈಸೂರು | ₹ 7.00 | ಸಂಪುಟ 20 | ಸಂಚಿಕೆ 80 | ಪುಟ 14

P-3

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾರತೀಯ ಭಾಷಾ ಸಂಸ್ಥಾನ ಅಭಿವೃದ್ಧಿಪಡಿಸಿದ ತಂತ್ರಾಂಶಗಳ ಬಿಡುಗಡೆ ಮಾಡಿದ ಪ್ರೊ.ದೈವ ಸುಂದರಂ ನಾಯರ್

ಪ್ರಾದೇಶಿಕ ಭಾಷೆಗಳಿಗೆ 'ಎ.ಐ' ಬೆಸುಗೆ

• ಮೋಹನ್ ಕುಮಾರ ಸಿ.

ಮುಖ್ಯಾಂಶಗಳು

- ಭಾಷಾಂತರದಲ್ಲಿ ನಿಖರತೆಗೆ ಆದ್ಯತೆ
- ಧ್ವನಿಯನ್ನು ಪಠ್ಯವಾಗಿಸುವ ಅವಕಾಶ
- ಪ್ರೋಗ್ರಾಮರ್‌ಗಳಿಗೂ ನೆರವು

ಡಿಜಿಟಲ್ ಇಂಡಿಯಾ ಭಾಗವಾಗಿ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಸಿಐಐಎಲ್ ತಂತ್ರಾಂಶಗಳು ನೆರವಾಗಲಿವೆ. ಭಾಷಾ ಸಮಾನತೆಗೆ ಪ್ರೋತ್ಸಾಹ ನೀಡಲಾಗಿದೆ.

ಪ್ರೊ.ಶೈಲೇಂದ್ರ ಮೋಹನ್, ಸಿಐಐಎಲ್ ನಿರ್ದೇಶಕ

ಮೈಸೂರು: ಇಲ್ಲಿನ ಭಾರತೀಯ ಭಾಷಾ ಸಂಸ್ಥಾನವು (ಸಿಐಐಎಲ್) ಕೃತಕ ಬುದ್ಧಿಮತ್ತೆ ಆಧಾರಿತ ಐದು ವೆಬ್ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದ್ದು, ಭಾಷಾಂತರ, ಲಿಪ್ಯಂತರ ಸೇರಿದಂತೆ ವಿವಿಧ ಉದ್ದೇಶಗಳಿಗೆ ನೆರವಾಗಲಿವೆ. ದೇಶದ ಎಲ್ಲ ಪ್ರಾದೇಶಿಕ ಭಾಷಿಕರಿಗೆ ಸೇತುವೆಯಾಗಲಿವೆ.

'ಅನುವಾದಿಕ', 'ಲಿಪ್ಯಂತರ', 'ಲಿಪಿಧ', 'ಅನುಲೇಖಿಕ' ಹಾಗೂ 'ಅನುವಾಚಿಕ' ಎ.ಐ ವೆಬ್ ತಂತ್ರಾಂಶಗಳೊಂದಿಗೆ, ಕೃತಕ ಬುದ್ಧಿಮತ್ತೆಯೇತರ 'ಧ್ವನಿ ಪರಿವರ್ತಕ', 'ಅಕ್ಷರಾಂಕ', 'ಶಬ್ದ ಸಂಧಾನ', 'ನುಡಿಯಲವಿ' ಹಾಗೂ 'ಪಾಠಾಂತರ' ತಂತ್ರಾಂಶಗಳನ್ನು ಬಿಡುಗಡೆ ಮಾಡಲಾಗಿದೆ. https://medha.ciil.org/ನಲ್ಲಿ ಇವು ಸಿಗುತ್ತವೆ. ಪ್ರತಿ ತಂತ್ರಾಂಶದ ಹೆಸರನ್ನು ವೆಬ್ ಬ್ರೌಸರ್‌ಗಳಲ್ಲಿ ಹುಡುಕಾಡಿದರೂ ಸಿಗುತ್ತವೆ.

'ಅನುವಾದಿಕ' ಭಾಷಾಂತರ ತಂತ್ರಾಂಶವಾಗಿದ್ದು, ಇಂಗ್ಲಿಷ್ ಜೊತೆಗೆ ಎಲ್ಲ ಭಾರತೀಯ ಭಾಷೆಗಳ ಪಠ್ಯಗಳನ್ನು ಅನುವಾದಿಸಬಹುದಾಗಿದ್ದು, ಧ್ವನಿಯ ಮೂಲಕವೂ ಪಠ್ಯ ದಾಖಲಿಸಿ ಭಾಷಾಂತರಿಸುವ ಆಯ್ಕೆಯನ್ನೂ ನೀಡಲಾಗಿದೆ. 'ಎಲ್ಲ ಭಾರತೀಯ ಭಾಷಿಕರ ನಡುವಿನ ಅಂತರವನ್ನು ಕೊನೆಗೊಳಿಸಲಿದೆ' ಎನ್ನುತ್ತಾರೆ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್.

'ಲಿಪ್ಯಂತರ' ತಂತ್ರಾಂಶವು ಪಠ್ಯವನ್ನು ಒಂದು ಲಿಪಿಯಿಂದ ಮತ್ತೊಂದು ಭಾಷಾ ಲಿಪಿಗೆ ಬದಲಿಸಬಹುದು. ಉರ್ದು ಹಾಗೂ ಕಾಶ್ಮೀರಿ ಭಾಷೆಗಳ ಅರೇಬಿಕ್ ಲಿಪಿ ಹೊರತುಪಡಿಸಿ ದೇಶದ ಬ್ರಾಹ್ಮಿ ಹಾಗೂ ದೇವನಾಗರಿ ಲಿಪಿಗಳನ್ನು ಬಳಸಬಹುದು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಡೆದ ಸಮ್ಮೇಳನದಲ್ಲಿ ಪ್ರೊ.ದೈವ ಸುಂದರಂ ನಾಯರ್ ಅವರು ವೆಬ್ ತಂತ್ರಾಂಶಗಳನ್ನು ಬಿಡುಗಡೆ ಮಾಡಿದರು. ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಪ್ರೊ.ಶೈಲೇಂದ್ರ ಮೋಹನ್, ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡೀಸ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

'ಲಿಪಿಧ' ಒಸಿಆರ್ ತಂತ್ರಾಂಶವಾಗಿದ್ದು, ಚಿತ್ರ ಮಾದರಿ ಯಲ್ಲಿರುವ ಪಠ್ಯ ಹಾಗೂ ಕೈ ಬರಹವನ್ನು ಪಠ್ಯವಾಗಿ ಪರಿವರ್ತಿಸಬಹುದು.

'ಅನುಲೇಖಿಕ' ತಂತ್ರಾಂಶವು ಆಡಿಯೊ ಫೈಲ್‌ಗಳನ್ನು ಪಠ್ಯಗಳಾಗಿ ಬದಲಿಸಿದರೆ, 'ಅನುವಾಚಿಕ' ಪಠ್ಯವನ್ನು ಧ್ವನಿಯಾಗಿ ರೂಪಿಸುವ ತಂತ್ರಾಂಶವಾಗಿದೆ.

ಕೃತಕ ಬುದ್ಧಿಮತ್ತೆಯೇತರ ಟೂಲ್ ಆದ 'ಧ್ವನಿ ಪರಿವರ್ತಕ'ವು wav, mp3 ಫೈಲ್‌ಗಳನ್ನು ಬೇರೆ ಬೇಕಾದ ಆಡಿಯೊ ವಿಧಾನಗಳಿಗೆ (ಫಾರ್ಮ್ಯಾಟ್) ಬದಲಿಸಿಕೊಡುತ್ತದೆ. 'ನುಡಿಯಲವಿ', 'ಪಾಠಾಂತರ' ತಂತ್ರಾಂಶಗಳು ಧ್ವನಿಯ ಗಾತ್ರ, ಅಂತರವನ್ನು ಹೇಳುತ್ತವೆ. 'ಅಕ್ಷರಾಂಕ'ವು ಪಠ್ಯದಲ್ಲಿನ ಅಕ್ಷರಗಳನ್ನು ಯೂನಿಕೋಡ್ ಮಾದರಿಯಲ್ಲಿ (ಕೋಡ್ ವ್ಯಾಲ್ಯೂ) ಬಿಡಿಸಿಕೊಡುತ್ತದೆ. ಪಠ್ಯ ರೂಪಾಂತರಿಸಲು ಪ್ರೋಗ್ರಾಮರ್‌ಗಳಿಗೆ ಸಹಾಯವಾಗಲಿದೆ.

'ತಂತ್ರಜ್ಞಾನ: ಸೃಜನಶೀಲತೆ ಕಸಿಯದು'

ಮೈಸೂರು: 'ಭಾರತೀಯ ಭಾಷೆಗಳ ಉನ್ನತೀಕರಣಕ್ಕೆ ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ನೆರವನ್ನು ಭಾಷಾ ವಿಜ್ಞಾನಿಗಳು, ಶಿಕ್ಷಣ ಸಂಸ್ಥೆಗಳು ಬಳಸಿಕೊಳ್ಳಬೇಕು. ಅವು ಸೃಜನಶೀಲತೆಯನ್ನು ಕಸಿಯುವುದಿಲ್ಲ' ಎಂದು ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಪ್ರತಿಪಾದಿಸಿದರು.

ಮಾನಸ ಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ಆರಂಭವಾದ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಎರಡು ದಿನಗಳ ಸಮ್ಮೇಳನ ಉದ್ಘಾಟಿಸಿ ಹಾಗೂ ಸಂಸ್ಥಾನವು ಅಭಿವೃದ್ಧಿ ಪಡಿಸಿರುವ 5 ವೆಬ್ ತಂತ್ರಾಂಶಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

'ಭಾಷಾ ಸಂಪತ್ತು ಹಾಗೂ ಅರಿವನ್ನು ಮುಂದಿನ ಪೀಳಿಗೆಗೆ ಕೊಡಲು ಭಾಷಾ ವಿಜ್ಞಾನಿಗಳು ಹಾಗೂ ಸಂಶೋಧಕರು ಸಂಪ್ರದಾಯವಾದಿತನವನ್ನು ಬಿಟ್ಟು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು' ಎಂದರು.

ಸಂಸ್ಥಾನದ ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ಮಾತನಾಡಿ, 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಕ್ರಾಂತಿಯನ್ನೇ ಉಂಟು ಮಾಡಿದ್ದು, ಅದು ದಶಕಗಳ ಸಂಶೋಧನೆಯ ಫಲವಾಗಿದೆ. ಎಲ್‌ಎಲ್‌ಎಂನಲ್ಲಿ (ಲಾರ್ಜ್ ಲಾಂಗ್ವೇಜ್ ಮಾಡಲ್) ಬಳಸಲಾಗುತ್ತಿದೆ' ಎಂದರು.

'ಎಲ್‌ಡಿಸಿ- ಐಎಲ್' ತಂತ್ರಾಂಶವನ್ನು ಡಾ.ನಾರಾಯಣ ಚೌಧರಿ ಹಾಗೂ ದತ್ತಾಂಶಗಳನ್ನು ಪ್ರೊ.ಕೆ.ಎಸ್.ರಜಿತಾ ಲೋಕಾರ್ಪಣೆಗೊಳಿಸಿದರು. ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡೀಸ್ ಇದ್ದರು.

Bennett & Coleman THE TIMES OF INDIA
www.vijaykarnataka.com
ಸಂಪುಟ: 25 | ಸಂಚಿಕೆ: 080
ಶುಕ್ರವಾರ,21 ಮಾರ್ಚ್ 2025 | ಪುಟಗಳು: 16 | ಬೆಲೆ: ₹ 5.00
VK
ವಿಜಯ ಕರ್ನಾಟಕ
ಮೈಸೂರು | ಬೆಂಗಳೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

P-10.

ಭಾಷೆ ಬೆಳವಣಿಗೆಗೆ ಎಐ ಬಳಸಿಕೊಳ್ಳಿ

ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಸಲಹೆ

ಮೈಸೂರು: ಭಾರತೀಯ ಭಾಷೆಗಳ ಬೆಳವಣಿಗೆಗೆ ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳನ್ನು ಬಳಕೆ ಮಾಡಿಕೊಳ್ಳಬೇಕೆಂದು ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಸಲಹೆ ನೀಡಿದರು.

ಮಾನಸಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ಆರಂಭವಾದ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಎರಡು ದಿನಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

''ಐದು ದಶಕಗಳಲ್ಲಿ ಭಾಷಾ ವಿಜ್ಞಾನದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಭಾಷಾ ಸಂಪತ್ತು ಹಾಗೂ ಅರಿವನ್ನು ಮುಂದಿನ ಪೀಳಿಗೆಗೆ ಕೊಡಲು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಿದೆ,'' ಎಂದರು.

''ಸಾಹಿತ್ಯ ಹಾಗೂ ಭಾಷೆಯ ಹೊಸ ನಿರೂಪಣೆ ಹಾಗೂ ಭಿನ್ನ ವಿಶ್ಲೇಷಣೆಯನ್ನು ಹೊಸ ತಂತ್ರಜ್ಞಾನಗಳು ನೀಡಲಿವೆ. ನಮ್ಮ ದತ್ತಾಂಶವನ್ನು ನಿಖರವಾಗಿ ಅವುಗಳಿಗೆ ಒದಗಿಸಬೇಕಿದೆ,'' ಎಂದರು.

''ಭಾಷಾ ಸಂಪತ್ತನ್ನು ಅರ್ಥಮಾಡಿಕೊಳ್ಳಲು, ಮರು ನಿರೂಪಣೆ ಮಾಡಲು ತಾಂತ್ರಿಕ ನೆರವನ್ನು ಸಂಶೋಧಕರು, ವಿದ್ಯಾರ್ಥಿಗಳು ಪಡೆಯಬೇಕು. ಸಮಯ ಉಳಿಸಬೇಕು. ಸೃಜನಶೀಲತೆಯನ್ನು ಬಿಡಬಾರದು,'' ಎಂದು ಸಲಹೆ ನೀಡಿದರು.

ಮಾನಸಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಎಲ್‌ಡಿಸಿ-ಐಎಲ್ ತಂತ್ರಾಂಶವನ್ನು ಡಾ.ನಾರಾಯಣ ಚೌಧರಿ ಹಾಗೂ ದತ್ತಾಂಶಗಳನ್ನು ಪ್ರೊ.ಕೆ.ಎಸ್.ರೆಜಿತಾ ಬಿಡುಗಡೆಗೊಳಿಸಿದರು.

ಸಂಸ್ಥಾನದ ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ಮಾತನಾಡಿ, ''ಮಾನವನ ವಿಕಾಸದಲ್ಲಿ ಬುದ್ಧಿಮತ್ತೆಯ ಪಾತ್ರ ದೊಡ್ಡದು. ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆಯು ಭಾಷೆ ಸೇರಿದಂತೆ ಜನರ ಜೀವನದ ಮೇಲೆ ಪ್ರಭಾವ ಬೀರುತ್ತಿದೆ. ಈಗಾಗಲೇ ನಡೆಸಿರುವ ಸಂಶೋಧನೆ, ಸಾಧನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರೂಪಿಸುವ ಸಮಯ ಇದಾಗಿದೆ' ಎಂದರು.

ಎಲ್‌ಡಿಸಿ-ಐಎಲ್ ತಂತ್ರಾಂಶವನ್ನು ಡಾ.ನಾರಾಯಣ ಚೌಧರಿ ಹಾಗೂ ದತ್ತಾಂಶಗಳನ್ನು ಪ್ರೊ.ಕೆ.ಎಸ್.ರೆಜಿತಾ ಬಿಡುಗಡೆಗೊಳಿಸಿದರು.

ಇದೇ ವೇಳೆ ಸಂಸ್ಥಾನವು ಅಭಿವೃದ್ಧಿಪಡಿಸಿರುವ 5 ವೆಬ್ ತಂತ್ರಾಂಶಗಳನ್ನು ಬಿಡುಗಡೆ ಮಾಡಲಾಯಿತು. ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಪ್ರೊ.ಪಿ.ಆರ್.ಧನಂಜಯ ಫರ್ನಾಂಡೀಸ್ ಪಾಲ್ಗೊಂಡಿದ್ದರು.

ಆಂದೋಲನ
ದಿನ ಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ
ತ-ಫಾಲ್ಗುಣ 30 ○ ಸಪ್ತಮಿ- ಜ್ಯೇಷ್ಠಾ, ಶುಕ್ರವಾರ, 21 ಮಾರ್ಚ್ 2025. ದೂರವಾಣಿ: 2449501, 2449504, 2449505

'ಭಾಷೆಗಳ ಉನ್ನತೀಕರಣಕ್ಕೆ ತಂತ್ರಜ್ಞಾನ ಬಳಸಿಕೊಳ್ಳಿ'

ರಾಷ್ಟ್ರೀಯ ಸಮ್ಮೇಳನದಲ್ಲಿ ಮದ್ರಾಸ್ ವಿವಿ ನಿವೃತ್ತ ಪ್ರಾಧ್ಯಾಪಕ ಎನ್.ದೈವ ಸುಂದರಂ ಅಭಿಮತ

ಮೈಸೂರು: ನಾವು ಹೊಸ ಯುಗದ ಉತ್ತುಂಗದಲ್ಲಿ ನಿಂತಿರುವಾಗ ಭವಿಷ್ಯದಲ್ಲಿ ಸಮತೋಲಿತ ವಿಧಾನ ಅಳವಡಿಸಿಕೊಳ್ಳುವುದು ಬಹಳ ಅಗತ್ಯವಾಗಿದ್ದು, ಸಾಮೂಹಿಕ ಕಾರ್ಯ ಮತ್ತು ಬುದ್ಧಿವಂತಿಕೆಯೊಂದಿಗೆ ನಮ್ಮೆಲ್ಲರ ಒಟ್ಟಾರೆ ಭವಿಷ್ಯವನ್ನು ಸುರಕ್ಷಿತವಾಗಿಸಿಕೊಂಡು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಸಾಧ್ಯವಾದರೆ ಮನುಕುಲಕ್ಕೆ ಅದು ದೊಡ್ಡ ಕೊಡುಗೆಯಾಗಲಿದೆ ಎಂದು ಮದ್ರಾಸ್ ವಿವಿ ನಿವೃತ್ತ ಪ್ರಾಧ್ಯಾಪಕ ಎನ್. ದೈವ ಸುಂದರಂ ಹೇಳಿದರು.

ನಗರದ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಕೃತಕ ಬುದ್ಧಿಮತ್ತೆ ಮಾನದಂಡಗಳ ಕುರಿತು ಗುರುವಾರ ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಈಗಿನ ಕಾಲಘಟ್ಟದಲ್ಲಿ ಭಾಷಾ ಶಾಸ್ತ್ರವು ವಿಶಾಲವಾಗಿ ಬೆಳವಣಿಗೆ ಹೊಂದಿದೆ. ವೆಬ್ ತಂತ್ರಜ್ಞಾನ ಬಂದ ಬಳಿಕ ಎಲ್ಲ ಭಾಷೆಗಳ ಮಾಹಿತಿ, ದಾಖಲೆಗಳು ಸುಲಭವಾಗಿ ದೊರಕುತ್ತಿವೆ. ಕೃತಕ ಬುದ್ಧಿಮತ್ತೆ ಬಂದ ಮೇಲಂತೂ ಇನ್ನೂ ಸರಾಗವಾಗಿ ಹೋಗಿದೆ. ಆದ್ದರಿಂದ ಭಾಷಾ ಸಂಪತ್ತನ್ನು ಅರ್ಥಮಾಡಿಕೊಳ್ಳಲು ಅವುಗಳನ್ನು ಮರು ನಿರೂಪಣೆ ಮಾಡಲು ತಂತ್ರಜ್ಞಾನದ ನೆರವನ್ನು ಸಂಶೋ ಧಕರು, ವಿದ್ಯಾರ್ಥಿಗಳು ಪಡೆಯಬೇಕು. ಇದರಿಂದ ಸಮಯ ಉಳಿತಾಯವಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಲ್‌ಡಿಸಿ-ಐಎಲ್ ತಂತ್ರಾಂಶದ ಮಾಹಿತಿಯನ್ನು ಡಾ.ನಾರಾಯಣ ಚೌಧರಿ ಹಾಗೂ ಡಾಟಾಸೆಟ್ ವಿವರವನ್ನು ಡಾ. ಕೆ.ಎಸ್.ರಜಿತಾ ನೀಡಿದರು. ಸಂಸ್ಥಾನದ ಉಪ ನಿರ್ದೇಶಕರಾದ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ಮಾತನಾಡಿದರು. ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಪ್ರೊ.ಪಿ.ಆರ್.ಧನಂಜಯ ಫರ್ನಾಂಡೀಸ್ ಉಪಸ್ಥಿತರಿದ್ದರು.

ಉದಯವಾಣಿ

ಜನಮನದ ಜೀವನಾಡಿ

www.udayavani.com | Bengaluru ಬೆಂಗಳೂರು | ಶುಕ್ರವಾರ, ಮಾರ್ಚ್ 21, 2025 | ಪುಟ 12+6 | ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲಬುರಗಿ | ದಾವಣಗೆರೆ | ಮುಂಬೈ | ಬೆಲೆ: ₹ 6.00

ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಗೆ ಮೊದಲ ಬಾರಿ ಮಹಿಳಾ ಅಧ್ಯಕ್ಷೆ »10

ಭಾಷಾಭಿವೃದ್ಧಿಗೆ ಎಐ ತಂತ್ರಜ್ಞಾನ ಬಳಸಿ

ಭಾಷಾ ವಿಜ್ಞಾನಿ ಪ್ರೊ.ಎನ್.ದೈವ ಸುಂದರಮ್ ಅಭಿಮತ ■ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಸಮ್ಮೇಳನ

■ ಉದಯವಾಣಿ ಸಮಾಚಾರ

ಮೈಸೂರು: ಪ್ರಸ್ತುತ ಜನಪ್ರಿಯವಾಗಿರುವ ನೂತನ ತಂತ್ರಜ್ಞಾನಗಳು ಸಾಹಿತ್ಯ ಹಾಗೂ ಭಾಷೆಯ ಹೊಸ ನಿರೂಪಣೆ ಮತ್ತು ಭಿನ್ನ ವಿಶ್ಲೇಷಣೆಯನ್ನು ನೀಡುತ್ತಿವೆ. ಅದಕ್ಕಾಗಿ ಭಾಷಾ ವಿಜ್ಞಾನಿಗಳು ದತ್ತಾಂಶಗಳನ್ನು ನಿಖರವಾಗಿ ಅವುಗಳಿಗೆ ಒದಗಿಸಬೇಕಾದ ಅವಶ್ಯಕತೆ ಇದೆ ಎಂದು ಭಾಷಾ ವಿಜ್ಞಾನಿ ಪ್ರೊ.ಎನ್.ದೈವ ಸುಂದರಮ್ ಅಭಿಪ್ರಾಯಪಟ್ಟರು.

ನಗರದ ಮಾನಸಗಂಗೋತ್ರಿಯಲ್ಲಿ ಇರುವ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ಆರಂಭವಾದ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಎರಡು ದಿನಗಳ ಸಮ್ಮೇಳನ ಉದ್ಘಾಟಿಸಿ ಹಾಗೂ ಸಂಸ್ಥಾನವು ಅಭಿವೃದ್ಧಿಪಡಿಸಿರುವ ಐದು ವೆಬ್ ತಂತ್ರಾಂಶಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮಯ ಉಳಿತಾಯ: ಈಗಿನ ಕಾಲಘಟ್ಟದಲ್ಲಿ ಭಾಷಾ ಶಾಸ್ತ್ರವು ವಿಶಾಲವಾಗಿ ಬೆಳವಣಿಗೆ ಹೊಂದಿದೆ. ವೆಬ್ ತಂತ್ರಜ್ಞಾನ ಬಂದ ಬಳಿಕ ಎಲ್ಲ ಭಾಷೆಗಳ ಮಾಹಿತಿ, ದಾಖಲೆಗಳು ಸುಲಭವಾಗಿ ದೊರಕುತ್ತಿವೆ. ಕೃತಕಬುದ್ಧಿಮತ್ತೆಯ ಬಂದ ಮೇಲಂತೂ ಇನ್ನೂ ಸರಾಗವಾಗಿ ಹೋಗಿದೆ. ಆದ್ದರಿಂದ ಭಾಷಾ ಸಂಪತ್ತನ್ನು ಅರ್ಥ ಮಾಡಿಕೊಳ್ಳಲು, ಅವುಗಳನ್ನು ಮರು ನಿರೂಪಣೆ ಮಾಡಲು ತಂತ್ರಜ್ಞಾನದ ನೆರವನ್ನು ಸಂಶೋಧಕರು, ವಿದ್ಯಾರ್ಥಿಗಳು ಪಡೆಯಬೇಕು. ಇದರಿಂದ ಸಮಯ ಉಳಿತಾಯವಾಗುತ್ತದೆ ಎಂದರು.

ತಂತ್ರಜ್ಞಾನಗಳ ನೆರವು ಬಳಸಿಕೊಳ್ಳಬೇಕು: ಐದು ದಶಕಗಳಲ್ಲಿ ಭಾಷಾ ವಿಜ್ಞಾನದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಭಾಷಾ ಸಂಪತ್ತು ಹಾಗೂ ಭಾಷೆಯ ಅರಿವನ್ನು ಮುಂದಿನ ಪೀಳಿಗೆಗೆ ಕೊಡಲು ತಂತ್ರಜ್ಞಾನ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾಗಿದೆ. ಭಾರತೀಯ ಭಾಷೆಗಳ ಉನ್ನತೀಕರಣಕ್ಕೆ ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ನೆರವನ್ನು ಭಾಷಾ ವಿಜ್ಞಾನಿಗಳು, ಶಿಕ್ಷಣ ಸಂಸ್ಥೆಗಳು ಬಳಸಿಕೊಳ್ಳಬೇಕು ಎಂದರು.



ಭಾರತೀಯ ಭಾಷಾ ಸಂಸ್ಥಾನದಲ್ಲಿ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಎರಡು ದಿನಗಳ ಸಮ್ಮೇಳನದಲ್ಲಿ ಐದು ವೆಬ್ ತಂತ್ರಾಂಶಗಳನ್ನು ಬಿಡುಗಡೆಗೊಳಿಸಲಾಯಿತು.

> " ಮಾನವನ ವಿಕಾಸದಲ್ಲಿ ಬುದ್ಧಿಮತ್ತೆಯ ಪಾತ್ರ ದೊಡ್ಡದು. ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆಯು ಭಾಷೆ ಸೇರಿದಂತೆ ಜನರ ಜೀವನದ ಮೇಲೆ ಪ್ರಭಾವ ಬೀರುತ್ತಿದೆ. ಈಗಾಗಲೇ ನಡೆಸಿರುವ ಸಂಶೋಧನೆ, ಸಾಧನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರೂಪಿಸುವ ಸಮಯ ಇದಾಗಿದೆ.
>
> ● ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಭಾರತೀಯ ಸಂಸ್ಥಾನದ ಉಪನಿರ್ದೇಶಕಿ

ಸಂಸ್ಥಾನದ ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ಮಾತನಾಡಿ, 2000ನೇ ಇಸವಿಯಲ್ಲಿ ತಲೆದೋರಿದ್ದ ಸಮಸ್ಯೆಯನ್ನು ಮೆಟ್ಟಿ ನಿಂತ ಬಳಿಕ ವೆಬ್ ತಂತ್ರಜ್ಞಾನವು ವೇಗವಾಗಿ ಬೆಳೆಯಿತು. ಈಗ ನಿತ್ಯ ಬಳಸುವ ಭಾಷೆಯ ಬಳಕೆಯನ್ನು ಆಧರಿಸಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಕ್ರಾಂತಿಯನ್ನೇ ಉಂಟು ಮಾಡಿದೆ ಎಂದರು.

ಸಾವಿರಾರು ಭಾಷಾ ವೈವಿಧ್ಯತೆಯನ್ನು ಹೊಂದಿರುವ ಭಾರತ ದೇಶದಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಕೆ ಮಾಡಿಕೊಂಡು ಭಾಷಾ ಬೆಳವಣಿಗೆಯನ್ನು ಯಾವ ರೀತಿ ಮಾಡಬೇಕು ಎನ್ನುವುದು ಸವಾಲಿನ ಕೆಲಸವೇ ಆಗಿದೆ. ಒಂದೇ ಭಾಷೆಯಲ್ಲಿ ಹಲವು ಉಪಭಾಷೆಗಳು ಇರುತ್ತವೆ. ಆಡು ಭಾಷೆಯೂ ಇರುತ್ತದೆ. 5ರಿಂದ 10 ಕಿಲೋ ಮೀಟರ್ ದೂರಕ್ಕೆ ಭಾಷೆಯ ಉಚ್ಛಾರಣೆಯಲ್ಲೇ ವ್ಯತ್ಯಾಸ ಇರುತ್ತದೆ. ಇವುಗಳನ್ನು ತಂತ್ರಾಂಶವು ಗ್ರಹಿಕೆ ಮಾಡುವುದಕ್ಕೆ ದತ್ತಾಂಶಗಳನ್ನು ಸರಿಯಾಗಿ ನೀಡಬೇಕಾಗುತ್ತದೆ. ಸಣ್ಣ ಪ್ರಮಾಣದಲ್ಲಿ ಬಳಸುವ ಭಾಷೆಗಳಾದ ಹಕ್ಕಿ-ಪಿಕ್ಕಿ, ಸೋಲಿಗ, ಜೇನು ಕುರುಬ ಮುಂತಾದ ಭಾಷೆಗಳನ್ನು ಸಹ ತಂತ್ರಾಂಶಕ್ಕೆ ಅಳವಡಿಸುವ ಸಾಧ್ಯಸಾಧ್ಯತೆಗಳ ಬಗ್ಗೆ ಆಲೋಚನೆ ಮಾಡಲಾಗುತ್ತಿದೆ ಎಂದರು.

ಎಲ್‌ಡಿಸಿ-ಐಎಲ್ ತಂತ್ರಾಂಶದ ಮಾಹಿತಿಯನ್ನು ಡಾ.ನಾರಾಯಣ ಚೌಧರಿ ಹಾಗೂ ಡಾಟಾಸೆಟ್ ವಿವರವನ್ನು ಡಾ.ಕೆ.ಎಸ್.ರಜಿತಾ ನೀಡಿದರು. ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡೀಸ್ ವೇದಿಕೆಯಲ್ಲಿ ಇದ್ದರು.

ವೆಬ್ ಅಪ್ಲಿಕೇಷನ್‌ಗಳ ಬಿಡುಗಡೆ

ಮೈಸೂರು: ಭಾರತೀಯ ಭಾಷಾ ಸಂಸ್ಥೆ ಅಭಿವೃದ್ಧಿಪಡಿಸಿರುವ ವೆಬ್ ಅಪ್ಲಿಕೇಷನ್ ಟೂಲ್ಸ್‌ಗಳನ್ನು ಗುರುವಾರ ಸಾರ್ವಜನಿಕ ಸೇವೆಗೆ ಲಭ್ಯಗೊಳಿಸಲಾಯಿತು. ಈ ಟೂಲ್‌ಗಳನ್ನು ಬಹುಭಾಷಾ ಕೃತಕ ಬುದ್ಧಿಮತ್ತೆಗೆ, ಭಾರತೀಯ ಭಾಷೆಗಳ ಅನುವಾದ, ಭಾಷಾಂತರಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸಲಾಗಿದೆ.

ಅನುವಾದಿಕ: ಇಂಗ್ಲಿಷ್ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಒಂದು ಭಾಷೆಯ ಪಠ್ಯವನ್ನು ಮತ್ತೊಂದು ಭಾಷೆಗೆ ಅನುವಾದ ಮಾಡಲು ಈ ಅಪ್ಲಿಕೇಷನ್ ಬಳಸಬಹುದು. ಇದು ಮಾತನ್ನೂ ಕೂಡಾ ಬರಹ ರೂಪಕ್ಕೆ ಮಾರ್ಪಾಡು ಮಾಡುತ್ತದೆ.

ಲಿಪ್ಯಂತರ: ಉರ್ದು, ಕಾಶ್ಮೀರಿ, ಅರೇಬಿಕ್ ಲಿಪಿಯನ್ನು ಹೊರತುಪಡಿಸಿ ಭಾರತೀಯ ಭಾಷೆಗಳ ಲಿಪಿಯನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಯ ಲಿಪಿಗೆ ರೂಪಾಂತರಗೊಳಿಸುತ್ತದೆ.

ಲಿಪಿಧಾ: ಅಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನೈಸ್ (ಒಸಿಆರ್) ಆಧಾರಿತ ಈ ಅಪ್ಲಿಕೇಷನ್ ಇಮೇಜ್, ಕೈ ಬರಹ, ಜೆಪಿಇಜಿ ನಮೂನೆಯಲ್ಲಿ ಇರುವ ಪಠ್ಯವನ್ನು ಮಾಮೂಲಿ ಪಠ್ಯವಾಗಿ ಪರಿವರ್ತನೆ ಮಾಡಿಕೊಡುತ್ತದೆ.

ಅನುಲೇಖಿಕ: ಆಟೋಮೆಟಿಕ್ ಸ್ಪೀಚ್ ರೆಕಗ್ನೈಸ್ (ಎಎಸ್‌ಆರ್) ತಂತ್ರಜ್ಞಾನ ಆಧಾರಿತ ಈ ಅಪ್ಲಿಕೇಷನ್ ಆಡುವ ಮಾತನ್ನು ಪಠ್ಯವಾಗಿ ಮಾರ್ಪಾಡು ಮಾಡಿಕೊಡುತ್ತದೆ. ಆಡಿಯೋ ಫೈಲ್ ಅನ್ನು ಬರಹ ರೂಪದಲ್ಲಿ ನೀಡುತ್ತದೆ.

ಅನುವಾಚಕ: ಈ ಅಪ್ಲಿಕೇಷನ್ ಪಠ್ಯವನ್ನು ಮಾತನ್ನಾಗಿ ಪರಿವರ್ತನೆ ಮಾಡುತ್ತದೆ.

P-04.

THE NEW
INDIAN EXPRESS



Reigning Miss World Krystyna Pyszková at a press meet in Hyderabad on Thursd

BENGALURU • FRIDAY • MARCH 21, 2025 • ₹9.00 • PAGES 14 • MYSURU EDITION

Use of AI tools in Indian language is a challenge in India: Prof Umarani

EXPRESS NEWS SERVICE @Mysuru

WITH the emergence of artificial intelligence, the Central Institute of Indian Languages (CIIL) released the Linguistic Data Consortium for Indian Languages and AI tools and non-AI language processing tools.

The CIIL authorities, during a conference on the Evaluation and Benchmarking of AI Applications in Indian Languages, launched AI tools Anuvadhika, Lipyantara Lipidha, Anulekhika and Anuvachhika and non-AI tools like Dhvani Parivartak, Aksharanka, Shahid Sandhan, Nudiyalavi and Paataantara.

The Anuvadika is the CIIL translation tool that integrates translation and language models with key features of domain-specific translation, text and speech integration, offline functionality, and a user-friendly interface for tech-savvy users.

CIIL professor-cum-deputy director Umarani Pappuswamy said the AI tools promote linguistic equity by empowering the regional languages in the digital space, reducing dependency on English and aligning with the Digital India programme of the Central government.

CIIL director prof Shailendra Mohan, Prof N Deiva Sundaram, prof Umarani and others at the 'AI Benchmarking conference' in Mysuru on Thursday | EXPRESS

She said there are 1,369 mother tongues, 22 scheduled languages and thousands of dialects in India. "India is the most linguistically diverse nation in the world. Developing linguistic tools is one thing and putting it into use is the next big challenge," she said.

Umarani said the AI should be used with complexity in the Indian language which will be useful for academics and research. The CIIL will be open to collaborations by providing data and tools to other institutions.

She felt that Tribal languages and dialects other than Tulu which are not present in cyberspace should be taken up on priority.

Former Professor and Head, Department of Tamil Language and Linguistic Studies Unit, University of Madras N Deiva Sundaram said there is a need to develop proper benchmarking tools for Indian languages. He said linguists should use AI to address the problems, and understand proper contexts that are assigned by the experts or users.

ಪ್ರಜೆಗಳಿಂದ ಪ್ರಜೆಗಳಿಗಾಗಿ...

ಪ್ರಜಾಸತ್ಯ

PRAJA SATHYA Kannada Daily

21, March 2025

ಕೊಡಗು । ಮೈಸೂರು । ಮಂಡ್ಯ । ಹಾಸನ । ಚಾಮರಾಜನಗರ

ಭಾಷೆಗಳ ಉನ್ನತೀಕರಣಕ್ಕೆ ಕೃತಕ ಬುದ್ಧಿಮತ್ತೆ ಬಳಸಿಕೊಳ್ಳಬೇಕು

» ಪ್ರಜಾಸತ್ಯ ವಾರ್ತೆ

ಮೈಸೂರು: ಭಾರತೀಯ ಭಾಷೆಗಳ ಉನ್ನತೀಕರಣಕ್ಕೆ ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ನೆರವನ್ನು ಭಾಷಾ ವಿಜ್ಞಾನಿಗಳು, ಶಿಕ್ಷಣ ಸಂಸ್ಥೆಗಳು ಬಳಸಿಕೊಳ್ಳಬೇಕು. ಅವು ಸೃಜನಶೀಲತೆ ಕಸಿಯುವುದಿಲ್ಲ ಎಂದು ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಪ್ರತಿಪಾದಿಸಿದರು.

ಮಾನಸಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ಆರಂಭವಾದ ಕೃತಕ ಬುದ್ಧಿಮತ್ತೆ ಮಾನದಂಡಗಳು ಕುರಿತ ಎರಡು ದಿನಗಳ ಸಮ್ಮೇಳನ ಉದ್ಘಾಟಿಸಿ ಹಾಗೂ ಸಂಸ್ಥಾನವು ಅಭಿವೃದ್ಧಿಪಡಿಸಿರುವ 5 ವೆಬ್ ತಂತ್ರಾಂಶಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಸಾಹಿತ್ಯ ಹಾಗೂ ಭಾಷೆಯ ಹೊಸ ನಿರೂಪಣೆ ಹಾಗೂ ಭಿನ್ನ ವಿಶ್ಲೇಷಣೆಯನ್ನು ಹೊಸ ತಂತ್ರಜ್ಞಾನಗಳು ನೀಡಲಿವೆ. ನಮ್ಮ ದತ್ತಾಂಶವನ್ನು ನಿಖರವಾಗಿ ಅವುಗಳಿಗೆ ಒದಗಿಸಬೇಕಿದೆ. ಎರಡು ದಶಕದ ಹಿಂದೆ ತಮಿಳನ್ನು ವ್ಯಾಕರಣ ಶುದ್ಧವಾಗಿ ಬರೆಯಲು ದತ್ತಾಂಶವನ್ನು ಅಭಿವೃದ್ಧಿ ಪಡಿಸಲಾಗಿತ್ತು. ಅದು ಇದೀಗ ಹೊಸ ತಂತ್ರಜ್ಞಾನಗಳು ಬಂದಾಗ ನೆರವಾಗಿದೆ ಎಂದು ಸ್ಮರಿಸಿದರು.

ಕೃತಕ ಬುದ್ಧಿಮತ್ತೆ ಮಾನದಂಡಗಳು ಕುರಿತ ಎರಡು ದಿನಗಳ ಸಮ್ಮೇಳನವನ್ನು ದೈವ ಸುಂದರಂ ನಾಯರ್ ಉದ್ಘಾಟಿಸಿದರು.

ಭಾಷಾ ಸಂಪತ್ತನ್ನು ಅರ್ಥಮಾಡಿಕೊಳ್ಳಲು, ಮರು ನಿರೂಪಣೆ ಮಾಡಲು ತಾಂತ್ರಿಕ ನೆರವನ್ನು ಸಂಶೋಧಕರು, ವಿದ್ಯಾರ್ಥಿಗಳು ಪಡೆಯಬೇಕು. ಸಮಯ ಉಳಿಸಬೇಕು. ಸೃಜನಶೀಲತೆಯನ್ನು ಬಿಡಬಾರದು ಎಂದು ಸಲಹೆ ನೀಡಿದರು.

ಸಂಸ್ಥಾನದ ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ಮಾತನಾಡಿ, ಮಾನವನ ವಿಕಾಸದಲ್ಲಿ ಬುದ್ಧಿಮತ್ತೆಯ ಪಾತ್ರ ದೊಡ್ಡದು. ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆಯು ಭಾಷೆ ಸೇರಿದಂತೆ ಜನರ ಜೀವನದ ಮೇಲೆ ಪ್ರಭಾವ ಬೀರುತ್ತಿದೆ. ಈಗಾಗಲೇ ನಡೆಸಿರುವ ಸಂಶೋಧನೆ, ಸಾಧನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರೂಪಿಸುವ ಸಮಯ ಇದಾಗಿದೆ ಎಂದರು.

1990, 2000ರ ದಶಕದಲ್ಲಿ ತಂತ್ರಜ್ಞಾನ ವೇಗವಾಗಿ ಬೆಳೆಯಿತು. ನಿತ್ಯ ಬಳಸುವ ಭಾಷೆಯ ಬಳಕೆಯನ್ನು ಆಧರಿಸಿ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಕ್ರಾಂತಿಯನ್ನೇ ಉಂಟುಮಾಡಿದ್ದು, ಅದು ದಶಕಗಳ ನಿರಂತರ ಸಂಶೋಧನೆಯ ಫಲವಾಗಿದೆ. ಎಲ್‌ಎಲ್‌ಎಂನಲ್ಲಿ(ಲಾರ್ಜ್ ಲಾಂಗ್ವೆಜ್ ಮಾಡಲ್) ಅದನ್ನು ಬಳಸಲಾಗುತ್ತಿದೆ. ದತ್ತಾಂಶಗಳ ಆಧರಿಸಿ ಭಾಷೆಯ ತರಬೇತಿ, ದಾಖಲೀಕರಣ, ವಿಶ್ಲೇಷಣೆ ಹಾಗೂ ಉನ್ನತೀಕರಣದಲ್ಲಿ ಎ.ಐ ನೆರವಾಗುತ್ತಿದೆ ಎಂದು ತಿಳಿಸಿದರು.

ಎಲ್‌ಡಿಸಿ ಐಎಲ್ ತಂತ್ರಾಂಶವನ್ನು ಡಾ.ನಾರಾಯಣ ಚೌಧರಿ ಹಾಗೂ ದತ್ತಾಂಶಗಳ ಲೋಕಾರ್ಪಣೆಯನ್ನು ಪ್ರೊ. ಕೆ.ಎಸ್.ರೆಜಿತಾ ಮಾಡಿದರು. ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಪ್ರೊ.ಪಿ.ಆರ್.ಧನಂಜಯ ಫರ್ನಾಂಡೀಸ್ ಪಾಲ್ಗೊಂಡಿದ್ದರು.

P-3.

ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1 ಕನ್ನಡ ದಿನಪತ್ರಿಕೆ

21 ಮಾರ್ಚ್ 2025, ಶುಕ್ರವಾರ

21 MARCH 2025

ಯಪುರ ● ಮೈಸೂರು ● ಗಂಗಾವತಿ ● ಚಿತ್ರದುರ್ಗ ● ಶಿವಮೊಗ್ಗ ● ಕಲಬುರಗಿ ● ಬೆಳಗಾವಿ VIJAYAVANI ● MYSURU ● ಮೈಸೂರು ● ಸಹಾಯವಾಣಿ: 8884411681 ● ಸಂಪುಟ 13 ● ಸಂಚಿಕೆ 310

ಭಾಷಾ ಸಂಪತ್ತು ತಲುಪಿಸಲು ತಂತ್ರಜ್ಞಾನ ಬಳಸಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಭಾರತೀಯ ಭಾಷಾ ಸಂಪತ್ತನ್ನು ಮುಂದಿನ ಜನಾಂಗಕ್ಕೆ ತಲುಪಿಸಲು ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂದು ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ತಿಳಿಸಿದರು.

■ ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಸಲಹೆ

■ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಸಮ್ಮೇಳನ

ಭಾರತೀಯ ಭಾಷಾ ಸಂಸ್ಥಾನದಲ್ಲಿ(ಸಿಐಐಎಲ್) ಗುರುವಾರ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತಾದ ಎರಡು ದಿನಗಳ ಸಮ್ಮೇಳನದಲ್ಲಿ ಮಾತನಾಡಿ, ಕಳೆದ 50 ವರ್ಷದಲ್ಲಿ ಭಾಷಾ ವಿಜ್ಞಾನದಲ್ಲಿ ಸಾಕಷ್ಟು ಪರಿವರ್ತನೆ ಗಳಾಗಿವೆ. ಭಾಷಾ ಸಂಪತ್ತಿನ ಪ್ರಗತಿಗಾಗಿ ತಂತ್ರಜ್ಞಾನ ಬಳಕೆ ಅಗತ್ಯವಾಗಿದೆ. ಭಾಷಾ ವಿಜ್ಞಾನಿಗಳು ಹಾಗೂ ಸಂಶೋಧಕರು ಸಂಪ್ರದಾಯವಾದಿತನವನ್ನು ಬಿಟ್ಟು ತಂತ್ರಜ್ಞಾನ ಸಂಸ್ಕೃತಿಗೆ ತೆರೆದುಕೊಳ್ಳಬೇಕಿದೆ ಎಂದರು.

ಭಾಷಾ ಸಂಪತ್ತನ್ನು ಅರ್ಥೈಸಿಕೊಳ್ಳಲು, ಮರು ನಿರೂಪಣೆ ಮಾಡಲು ತಾಂತ್ರಿಕ ಸಹಾಯವನ್ನು ಸಂಶೋಧಕರು, ವಿದ್ಯಾರ್ಥಿಗಳು ಪಡೆಯಬೇಕು. ಇದರಿಂದಾಗಿ ಸಮಯ ಉಳಿಸಬೇಕು. ಆದರೆ, ಸೃಜನಶೀಲತೆಯನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಆಧುನಿಕ ತಂತ್ರಜ್ಞಾನ ಬಳಕೆಯಿಂದ ಸಾಹಿತ್ಯ ಹಾಗೂ ಭಾಷೆಯ ಹೊಸ ನಿರೂಪಣೆ, ಭಿನ್ನ ವಿಶ್ಲೇಷಣೆ ದೊರೆಯಲಿದೆ. ಹಾಲಿ ಇರುವ ದತ್ತಾಂಶವನ್ನು ನಿಖರವಾಗಿ ಅವುಗಳಿಗೆ ಒದಗಿಸಬೇಕಿದೆ. 20 ವರ್ಷಗಳ ಹಿಂದೆ ತಮಿಳು ಭಾಷೆಯಲ್ಲಿನ ವ್ಯಾಕರಣ ಶುದ್ಧೀಕರಣಕ್ಕಾಗಿ ದತ್ತಾಂಶವನ್ನು ರೂಪಿಸಲಾಗಿತ್ತು. ಅದು ಈಗ ನವ ತಂತ್ರಜ್ಞಾನಗಳು ಬಂದಾಗ ಅನುಕೂಲವಾಗಿದೆ ಎಂದರು.

ಸಿಐಐಎಲ್ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಸಮ್ಮೇಳನವನ್ನು ಭಾಷಾ ವಿಜ್ಞಾನಿ ಪ್ರೊ.ದೈವ ಸುಂದರಂ ನಾಯರ್ ಉದ್ಘಾಟಿಸಿದರು. ಪ್ರೊ.ಶೈಲೇಂದ್ರ ಮೋಹನ್, ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಪ್ರೊ.ಪಿ.ಆರ್.ಧನಂಜಯ ಫರ್ನಾಂಡೀಸ್ ಇದ್ದರು.

ಭಾರತೀಯ ಭಾಷೆಗಳ ಅಭಿವೃದ್ಧಿಗೆ ಕೃತಕ ಬುದ್ಧಿಮತ್ತೆ(ಎಐ) ಸೇರಿದಂತೆ ಆಧುನಿಕ ತಾಂತ್ರಿಕತೆಯ ಸಹಾಯವನ್ನು ಭಾಷಾ ವಿಜ್ಞಾನಿಗಳು, ಶಿಕ್ಷಣ ಸಂಸ್ಥೆಗಳು ಉಪಯೋಗ ಮಾಡಿಕೊಳ್ಳಬೇಕು. ಇದರಿಂದ ಏನು ಸೃಜನಶೀಲತೆ ಧಕ್ಕೆಯಾಗುವುದಿಲ್ಲ ಎಂದರು.

ಸಿಐಐಎಲ್ ಅಭಿವೃದ್ಧಿಪಡಿಸಿರುವ 5 ವೆಬ್ ತಂತ್ರಾಂಶಗಳನ್ನು ಅನಾವರಣ ಗೊಳಿಸಲಾಯಿತು. ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪ ನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಪ್ರೊ.ಪಿ.ಆರ್.ಧನಂಜಯ ಫರ್ನಾಂಡೀಸ್, ಡಾ.ನಾರಾಯಣ ಚೌಧರಿ, ಪ್ರೊ.ಕೆ.ಎಸ್.ರಜಿತಾ ಇದ್ದರು.

BENNETT, COLEMAN & CO. LTD. | Estd. MDCCCXXXVIII | VOL. 21 NO. 69 MYSURU | FRIDAY, MARCH 21, 2025 | PAGES 22 | PRICE ₹6

THE TIMES OF INDIA

INDIA'S LARGEST ENGLISH NEWSPAPER | To subscribe call 1800 1200 004 or visit subscribe.timesofindia.com

P-5

CIIL launches five AI tools during two-day conference

TIMES NEWS NETWORK

Mysuru: In a major step towards AI-powered translation, transliteration, and other linguistic-related services, the city-based Central Institute of Indian Languages (CIIL) launched five AI tools—Anuvadika, Lipyantara, Lipidha, Anulekhika, and Anuvachika—during the two-day conference on Evaluation and Benchmarking of AI Applications in Indian Languages, which started on Thursday.

Anuvadika is a translation tool that integrates transliteration and language models. It translates text from any Indian language (including English) to any Indian language (including English). This web application also supports the transliteration of both source and target text. It also has a language detection module to identify the language of the source text automatically.

Lipyantara converts text from one script to another script, while Lipidha is an OCR tool. Anulekhika is a transcription tool based on an ASR (automatic speech recognition) system developed using various sources. Anuvachika is a text-to-speech tool.

During the event, five non-AI tools—Shabd Sandhan, Aksharanka, Dhvani Parivartak, Nudiyalavi, and Paataantara—were also launched. Datasets of 145 languages, including Kodava and Tulu, were also released on the occasion.

Umarani Pappuswamy, deputy director of the CIIL, who introduced the theme of the conference, observed that there is a need to prepare Large Language Models (LLMs) even for the tribal and minority languages of India. "This can start with preparing LLMs for all tribal languages of Karnataka like Betta Kuruba, Jenu Kuraba, Hakki Pikki, Soliga, etc.," she said.

Umarani also said: "We need to focus on languages like Tulu, which don't have much cyber visibility. She stated that (artificial intelligence) AI can be used to preserve linguistic heritage by making them accessible while also equipping communities with tools for digital inclusion."

Linguists, including Rejitha KS, N Deiva Sundaram, and others, were present. CIIL director Shailendra Mohan presided over the event.

Madhusudhan SR

TECH REVOLUTION: Five AI tools—Anuvadika, Lipyantara, Lipidha, Anulekhika, and Anuvachika—were launched during the two-day conference

University of Mysore (UoM) research scholar Rashmi T, who presented a paper on the formative evaluation of Generative AI Models in Kannada Sentiment Analysis, stated that her findings highlight key differences in sentiment interpretation between human annotators and AI models, emphasising the complexities of analysing Kannada-English code-mixed comments. Rashmi T, who analysed a few Kannada statements that were translated into English, stated that AI models often struggle with sarcasm, emoji usage, and indirect expressions, leading to misclassification.

ಪತ್ರಿಕಾ

राजस्थान पत्रिका

वर्ष : 30 | अंक : 55 | पृष्ठ 12 | ₹6.00 | बेंगलूरु | शुक्रवार, 21 मार्च, 2025 | चैत्र कृष्ण पक्ष सप्तमी-अष्टमी, संवत् 2081

भारतीय भाषाओं के लिए उपयोगी एआई टूल्स पर राष्ट्रीय सम्मेलन शुरू

मैसूरु @ पत्रिका. केंद्रीय भारतीय भाषा संस्थान (सीआईआईएल) में भारतीय भाषाओं का समर्थन करने वाले सार्वजनिक रूप से उपलब्ध कृत्रिम बुद्धिमत्ता (एआई) अनुप्रयोगों के मूल्यांकन और बेंचमार्किंग पर दो दिवसीय राष्ट्रीय सम्मेलन शुरू हुआ।

भारतीय भाषाओं के लिए भाषाई डेटा संघ (एलडीसी-आईएल) की ओर से आयोजित कार्यक्रम में भारतीय भाषाओं के लिए कृत्रिम बुद्धिमत्ता के लाभों पर चर्चा हुई।

औपचारिक उद्घाटन सत्र के बाद पूर्ण सत्र और पेपर प्रस्तुतियों में विशेषज्ञों ने भारतीय भाषाओं के लिए एआई अनुप्रयोगों के मूल्यांकन और प्रभावकारिता से संबंधित विषयों पर अपने विचार साझा किए। मुद्दों और चुनौतियों पर भी चर्चा की गई। सत्र शुक्रवार को भी आयोजित किए जाएंगे। आयोजकों ने बताया कि सम्मेलन में देश भर के 25 से अधिक वक्ताओं ने हिस्सा लिया। इनमें देश के शीर्ष शैक्षणिक संस्थानों के साथ-साथ उद्योग जगत की बड़ी हस्तियां शामिल थीं।

सम्मेलन का उद्घाटन करते हुए मद्रास विश्वविद्यालय, चेन्नई में तमिल भाषा के सेवानिवृत्त प्रोफेसर एन. देवा सुंदरम ने बताया कि भारतीय भाषाओं के संदर्भ में एआई उपकरणों का किस तरह से लाभ उठाया जा सकता है और बेंचमार्किंग कैसे की जा सकती है। उन्होंने भाषाई डेटा सेट और एआई पारिस्थितिकी तंत्र के बारे में विस्तार से बताया, जिसे भाषा विकास में शामिल किया जा सकता है। उन्होंने बेंचमार्किंग के लिए एआई उपकरणों की क्षमता का आकलन किया।

सीआईआईएल की उप निदेशक उमरानी पप्पुस्वामी ने कहा कि यह सम्मेलन भारतीय भाषाई परिदृश्य से संबंधित बेंचमार्किंग पर चर्चा करने के लिए एक महत्वपूर्ण सहयोगी मंच है। सीआईआईएल के निदेशक शैलेंद्र मोहन ने अध्यक्षता की। सीआईआईएल के उप निदेशक पीआरडी फर्नांडीज ने भी विचार व्यक्त किए। इस अवसर पर, एलडीसी-आईएल में विकसित 15 नए भाषा डेटा सेट जारी किए गए। साथ ही सीआईआईएल ने कुछ बहुभाषी एआई और गैर-एआई भाषा उपकरण लॉन्च किए जो सार्वजनिक रूप से उपलब्ध होंगे।

BENNETT, COLEMAN & CO. LTD. | Estd. MDCCCXXXVIII | VOL. 21 NO. 69 | MYSURU | FRIDAY, MARCH 21, 2025 | PAGES 22 | PRICE ₹6

THE TIMES OF INDIA

INDIA'S LARGEST ENGLISH NEWSPAPER | To subscribe call 1800 1200 004 or visit subscribe.timesofindia.com

P-5

CIIL launches five AI tools during two-day conference

Times News Network

Mysuru: In a major step towards AI-powered translation, transliteration, and other linguistic-related services, the city-based Central Institute of Indian Languages (CIIL) launched five AI tools—Anuvadika, Lipyantara, Lipidha, Anulekhika, and Anuvachika—during the two-day conference on Evaluation and Benchmarking of AI Applications in Indian Languages, which started on Thursday.

Anuvadika is a translation tool that integrates transliteration and language models. It translates text from any Indian language (including English) to any Indian language (including English). This web application also supports the transliteration of both source and target text. It also has a language detection module to identify the language of the source text automatically.

Lipyantara converts text from one script to another script, while Lipidha is an OCR tool. Anulekhika is a transcription tool based on an ASR (automatic speech recognition) system developed using various sources. Anuvachika is a text-to-speech tool.

During the event, five non-AI tools—Shabd Sandhan, Aksharanka, Dhvani Parivartak, Nudiyalavi, and Paataantara—were also launched. Datasets of 145 languages, including Kodava and Tulu, were also released on the occasion.

Madhusudhan SR

TECH REVOLUTION: Five AI tools—Anuvadika, Lipyantara, Lipidha, Anulekhika, and Anuvachika— were launched during the two-day conference

Umarani Pappuswamy, deputy director of the CIIL, who introduced the theme of the conference, observed that there is a need to prepare Large Language Models (LLMs) even for the tribal and minority languages of India. "This can start with preparing LLMs for all tribal languages of Karnataka like Betta Kuruba, Jenu Kuraba, Hakki Pikki, Soliga, etc.," she said.

Umarani also said: "We need to focus on languages like Tulu, which don't have much cyber visibility. She stated that (artificial intelligence) AI can be used to preserve linguistic heritage by making them accessible while also equipping communities with tools for digital inclusion."

Linguists, including Rejitha KS, N Deiva Sundaram, and others, were present. CIIL director Shailendra Mohan presided over the event.

University of Mysore (UoM) research scholar Rashmi T, who presented a paper on the formative evaluation of Generative AI Models in Kannada Sentiment Analysis, stated that her findings highlight key differences in sentiment interpretation between human annotators and AI models, emphasising the complexities of analysing Kannada-English code-mixed comments. Rashmi T, who analysed a few Kannada statements that were translated into English, stated that AI models often struggle with sarcasm, emoji usage, and indirect expressions, leading to misclassification.